



"ಸರ್ ನಾನು ನಿಜವಾಗಿಯೂ ಕೊಲೆ ಮಾಡಿಲ್ಲ... ನನ್ನನ್ನು ನಂಬಿ..." ಎಂದು ಕೂಗುತ್ತಾ ಓಡಿಬಂದು ಇನ್‌ಸ್ಪೆಕ್ಟರ್ ಭೂಷಣ್‌ನ ಕಾಲಿಗೆ ಬಿದ್ದ ನವೀನ್.

'ಮನೆಯ ಮುಂದೆ ಬಿದ್ದಿದ್ದ ಯುವತಿಯ ಶವ... ಚಾಕುವಿನಿಂದ ಚುಚ್ಚಿ ಭೀಕರವಾಗಿ ಕೊಲೆಮಾಡಲಾಗಿದೆ... ಅದನ್ನು ನೋಡಿದೆ' ಎನ್ನುವ ಪ್ರತ್ಯಕ್ಷ ಸಾಕ್ಷಿ ಇದ್ದಾನೆ ಎನ್ನಲಾಗುತ್ತಿದೆ. ಅಂತಹುದರಲ್ಲಿಯೂ ನಾನು ಕೊಲೆ ಮಾಡಲಿಲ್ಲ ಅಂತ ಹೇಳುತ್ತಿರುವ ನವೀನ್ ಕಂಡು ಭೂಷಣ್ ವ್ಯಂಗ್ಯವಾಗಿ ನಕ್ಕ.

''ಸರ್ ನಮಗೂ ಸ್ವಲ್ಪ ಸಮಯದ ಹಿಂದೆ ಯಾರೋ ಕಿರುಚಿಕೊಂಡ ಶಬ್ದ ಕೇಳಿಸಿತು... ಕೆಳಕ್ಕೆ ಓಡಿ ಬಂದು ನೋಡಿದರೆ, ನನ್ನ ಮನೆಯ ಮುಂದೆ ಇವಳ ಶವ ಬಿದ್ದಿತ್ತು."

ತನ್ನ ಪೊಲೀಸ್ ಜೀವನದಲ್ಲಿ ಅದೆಷ್ಟೋ ಕ್ರಿಮಿನಲ್‌ಗಳೂ, ಅವರಾಡುವ ನಾಟಕದ ಮಾತುಗಳನ್ನೂ ಕೇಳಿದ್ದ ಭೂಷಣ್,

"ಈ ಗೋಳಾಟ, ಕಳ್ಳಅಳು, ನಾಟಕ ಇವೆಲ್ಲಾ ನಾವು ಬೇಕಾದಷ್ಟು ನೋಡಿದ್ದೇವೆ. ಇದೆಲ್ಲಾ ನೀವು ಮಾಡಿದ ಕೊಲೆ ಮುಚ್ಚಿ ಹಾಕಲು ಸಾಧ್ಯವಿಲ್ಲ... ನೀವು ಕೊಲೆ ಮಾಡುತ್ತಿರುವುದನ್ನು ನಿಮ್ಮ ಎದುರು ಮನೆಯವರು ಕಣ್ಣಾರೆ ನೋಡಿದ್ದಾರೆ. ಅದಕ್ಕಿಂತಾ ಬೇರೆ ಸಾಕ್ಷಿ ಬೇಕಾ ನೀವೇ ಕೊಲೆ ಮಾಡಿದಿರೆಂದು?"

ಅವನ ಧ್ವನಿಯಲ್ಲಿ ಪೊಲೀಸ್ ದರ್ಪವಿತ್ತು.

ಪ್ರಿಮಿಯರ್ ಹೌಸಿಂಗ್ ಸೊಸೈಟಿಯಲ್ಲಿ, ಮಧ್ಯರಾತ್ರಿ ನಡೆದ ಆ ಘಟನೆ ಎಲ್ಲರನ್ನೂ ನಡುಗಿಸಿತ್ತು. ಮೇಲ್ಮಧ್ಯಮ ವರ್ಗದವರಿದ್ದ ಆ ಗೇಟೆಡ್ ಕಮ್ಯುನಿಟಿಯಲ್ಲಿ ಅಲ್ಲಿಯವರೆಗೂ ಒಂದು ಸಣ್ಣ ಕಳ್ಳತನ ಕೂಡಾ ನಡೆದಿರಲಿಲ್ಲ. ಅಂತಹುದರಲ್ಲಿ ಆ ಕೊಲೆ... ಅದೂ ನವೀನ್‌ನ ಮನೆಯ ಮುಂದೆ... ಎಲ್ಲರಿಗೂ ನಂಬಲಸಾಧ್ಯವಾಗಿತ್ತು. ನವೀನ್ ಮತ್ತು ಅವನ ಹೆಂಡತಿ ಸುನಂದಾ, ಎಲ್ಲರೊಂದಿಗೆ ಅನ್ಯೋನ್ಯವಾಗಿಯೇ ಇದ್ದರು. ಅವರ ಮನೆಯಮುಂದೆ ಈ ಘಟನೆ, ಅದಕ್ಕೆ ಕಾರಣ ಅವರೇ ಅನ್ನುವುದನ್ನು ಅವರಿಗೆಲ್ಲಾ ನಂಬಲಿಕ್ಕೇ ಆಗದೇ, ಅಂತಹ ಚಳಿಗಾಲದಲ್ಲಿಯೂ ರಾತ್ರಿ ಒಂದು ಗಂಟೆಗೆ ಎಲ್ಲಾ ಬಂದು ನೆರೆದಿದ್ದರು.

ಆ ಗುಂಪಿನಲ್ಲಿದ್ದ ಒಬ್ಬನನ್ನು ಕರೆತಂದ ಕಾನ್‌ಸ್ಟೆಬಲ್.

"ಸರ್, ಇವರೇ ನಮಗೆ ಫೋನ್ ಮಾಡಿದ್ದು... ಇವರೇ ಈ ಕೊಲೆಯ ಪ್ರತ್ಯಕ್ಷದರ್ಶಿ."

ಬಂದವನು ಮೆಲುದನಿಯಲ್ಲಿ ಇನ್‌ಸ್ಪೆಕ್ಟರ್ ಕಡೆ ನೋಡಿ ಮೆತ್ತಗೆ 'ನಮಸ್ಕಾರ ಸರ್" ಎಂದ. ಅವನ ಮುಖದಲ್ಲಿ ಭಯ ತುಂಬಿತ್ತು. ಅಂಥಾ ಚಳಿಯಲ್ಲಿಯೂ ಬೆವರುತ್ತಿದ್ದ.

"ಭಯ ಬೇಡ, ಏನಾಯಿತು ಹೇಳಿ."

"ಸರ್, ನಾನು ರವಿಕಾಂತ್ ಅಂತ... ಇಲ್ಲೇ ಲೇಡೀಸ್ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದೇನೆ. IASಗೆ ತಯಾರಿ ಕೂಡ ಮಾಡಿಕೊಳ್ಳುತ್ತಿದ್ದೇನೆ. ಹಾಗಾಗಿ ರಾತ್ರಿ ಎರಡು ಗಂಟೆಯವರೆಗೂ ಓದಿಕೊಳ್ಳುತ್ತಿರುತ್ತೇನೆ. ರಾತ್ರಿ ಸುಮಾರು ಹನ್ನೆರಡರ ವೇಳೆಗೆ, ಹೊರಗಡೆಯಿಂದ ಯಾರೋ ಚೀರಿದ ಶಬ್ದ ಕೇಳಿಸಿತು. ಮೇಲಿನ ಕೊಠಡಿಯಲ್ಲಿ ಓದಿಕೊಳ್ಳುತ್ತಿದ್ದ ನಾನು ಎದ್ದು ಕಿಟಕಿ ಬಾಗಿಲು ತೆರೆದು ನೋಡಿದೆ. ನಾನು ನೋಡಿದ್ದು, ಈ ನವೀನ್... ನಾನು ನೋಡುತ್ತಿರುವಂತೆಯೇ ಚಾಕುವಿನಿಂದ ಕೆಳಗಡೆ ಬಿದ್ದಿರುವ ಈ ಹುಡುಗಿಗೆ ಚುಚ್ಚಿದ... ಅದನ್ನು ನೋಡಿ ಭಯದಿಂದ ನಾನು ಚೀರಿಕೊಂಡು, ಕೆಳಕ್ಕೆ ಓಡಿಬರುವಷ್ಟರಲ್ಲಿ ನವೀನ್ ತನ್ನ ಮನೆ ಸೇರಿಕೊಂಡಿದ್ದ."